## ನನ್ನ ಓದು

ಬೆಟ್ಟದಿಂದ ಕೆಳಗಿಳಿದು ಹೊಳೆಯ ನೀರಿನಿಂದ ಮುಖ ತೊಳೆದುಕೊಳ್ಳುವ 'ಆಕೆ'ಯನ್ನೂ, ಹೊಳೆಯ ಸೆರಗಿನಿಂದ ಬೆವರೊರೆಸಿಕೊಳ್ಳುವ ಸೂರ್ಯನನ್ನೂ, ಇವರಿಬ್ಬರನ್ನೂ ನೋಡುವ ಹೊಳೆಯನ್ನೂ ಬೇರೆ ಬೇರೆಯಾಗಿಸುವುದು ಹೇಗೆ? ಹಾಗೆ ಬೇರ್ಪಡಿಸುವುದೇ ನಾಗರಿಕ ಜಗತ್ತು ನಡೆಸುತ್ತಿರುವ ಅತಿದೊಡ್ಡ ಕ್ರೌರ್ಯ ಎಂಬ ಧ್ವನಿಯೂ ಆಳವಾಗಿದೆ. ಹಾಗಾಗಿಯೇ,

'ಮನೆ, ಬತ್ತದ ರಾಶಿ, ಮಣ್ಣು, ಬಟ್ಟೆಬರೆ
ಎಲ್ಲವನ್ನೂ ಬಿಟ್ಟು ಪಟ್ಟಣಕ್ಕೆ ಓಡಿಬಂದವರು
ಕೇಳುತ್ತಾರೆ:
ವಿಕಾಸದ ಹೆಸರಿನಲ್ಲಿ
ನೀನೂ ಕೂಡ ನಿನ್ನದೇ ಬೇರಿನಿಂದ
ಎಂದಾದರು ಬೇರಾಗಿದ್ದೀಯಾ. ಹೇ ಪಟ್ಟಣವೇ?'

ಎಂದು 'ಹೇ ಪಟ್ಟಣವೇ!' ಎಂಬ ಪದ್ಯ ಪ್ರಶ್ನಿಸುತ್ತದೆ.

ಈ ಸಂಕಲನದ ಶೀರ್ಷಿಕೆ ಪದ್ಯ, ಆದಿವಾಸಿಗಳ ಓಟು ಪಡೆದು ವಿಜಯೋತ್ಸವದಲ್ಲಿ ಮೆರೆಯುತ್ತಿರುವಾಗಲೇ ಅತ್ತ, ಜನರು ಆತ್ಮಹತ್ಯೆಗೆ ಒಳಗಾಗುತ್ತಿರುವ ವಿಪರ್ಯಾಸವನ್ನು ಕಟ್ಟಿಕೊಡುತ್ತದೆ. ಅಲ್ಲಿ ಮಣ್ಣಿನ ದಿಬ್ಬದ ಮೇಲೆ ರಾಗಿ ಕೊನರಿದೆ. ಆದರೆ ಅದು ಬರೀ ಮಣ್ಣಿನ ದಿಬ್ಬವಲ್ಲ, ಹಸಿವಿನಿಂದ ಸತ್ತ ಸುಗ್ನಾನ ಗೋರಿ. ಅವನ ಮನೆಯ ತಣ್ಣಗಿನ ಒಲೆಯೊಳಗೆ ರಾಗಿ ಮೊಳಕೆಯೊಡೆದಿದೆ. ಆದರೆ ಸುಗ್ನಾನ ಅನಾಥ ಮಕ್ಕಳು ಹಸಿವಿನಿಂದ ವಿಲಗುಟ್ಟುತ್ತಿದ್ದಾರೆ.

'ಅವನ ವಿಧವೆ ಹೆಂಡತಿ
ಹಸಿವಿನ ಬೆಂಕಿಗೆ ಕರಿಗಟ್ಟಿದ
ಮಡಿಕೆಯ ಬುಡವನ್ನು ಕೆಂಡಗಣ್ಣಿನಿಂದ
ನೋಡುತ್ತಾಳೆ.'

ಇಲ್ಲಿ ಬೆಂಕಿ ಉರಿಯಬೇಕಾದ ಒಲೆ ರಾಗಿ ಮೊಳಕೆಯೊಡೆಯುವಷ್ಟು ತಣ್ಣಗಿದೆ. ಆದರೆ ತಣ್ಣಗಿರಬೇಕಾದ ಮನುಷ್ಯರ ಕಣ್ಣಿನಲ್ಲಿ ಕೆಂಡ ಉರಿಯುತ್ತಿದೆ. ಈ ವೈರುಧ್ಯವನ್ನು ಪದ್ಯ ತಣ್ಣನೆಯ ಧ್ವನಿಯಲ್ಲಿಯೇ ಹಿಡಿದಿಡುತ್ತದೆ.

'ನನ್ನ ಕೈಯಲ್ಲಿರುವ ಆಯುಧ' ಪದ್ಯದಲ್ಲಿ ಮನೆಯಿಂದಾಚೆ ಹೋಗುವ ಅಮ್ಮನ ಕೈಯಲ್ಲಿ ಬುಟ್ಟಿ ಮತ್ತು ಗಾರೆಯ ಬದಲಿಗೆ ಬಿಲ್ಲು-ಬಾಣವಿದೆ. ಹಾಗೆ ಕಾಣೆಯಾಗಿಹೋದ ಅಮ್ಮನ ಕನಸು ಕಾಪಾಡಲು ಅವಳ ಮಕ್ಕಳೂ ಹೋರಾಟಕ್ಕಿಳಿದಿದ್ದಾರೆ. ಆ ಪದ್ಯ ಕೊನೆಗೊಳ್ಳುವುದು ಹೀಗೆ:

'ಎಲ್ಲರಿಗೂ ಇದೊಂದು ಹೋರಾಟವಾಗಿ ಮಾತ್ರ
ಕಾಣುತ್ತದೆ.
ಯಾರಿಗೂ
ಶತಶತಮಾನಗಳ ನೋವು ಕಾಣಿಸುತ್ತಿಲ್ಲ.
ದಶಕಗಳಷ್ಟು ಹಳತಾದರೂ
ಇನ್ನೂ ಹಸಿಹಸಿಯಾಗಿರುವ ಗಾಯ ಕಾಣಿಸುತ್ತಿಲ್ಲ.
ಲೂಟಿ ಮಾಡುವ ಭರದಲ್ಲಿ ಎದುರಾಳಿ
ತನ್ನ ವಿಷ ಲೇಪಿತ ಉಗುರುಗಳಿಂದ
ನನ್ನ ಜೀವವನ್ನು ಪರಚಿದ್ದು ಸಹ ಕಾಣಿಸುತ್ತಿಲ್ಲ.
ಎಲ್ಲರಿಗೆ ಕಾಣಿಸುವುದ ಇಷ್ಟು ಮಾತ್ರ:
ನನ್ನ ನೆಲ, ನನ್ನ ಕಾಡು
ಮತ್ತು ನನ್ನ ಕೈಯಲ್ಲಿರುವ ಆಯುಧ.'

ಇಲ್ಲಿನ ಒಂದೊಂದು ಪದ್ಯಗಳೂ ನಾವು ಮುಟ್ಟಲು ಸೋತಿರುವ ಅಥವಾ ಮರೆತಿರುವ ಜಗತ್ತಿನ ಒಂದೊಂದು ಹಸಿ ತುಣುಕುಗಳು. ಅವುಗಳನ್ನು ಮುಟ್ಟಿದಂತೆಲ್ಲ ವಿಷಾದ ನಮ್ಮೊಳಗೆ ತೊಟ್ಟಿಕ್ಕುತ್ತ ಹೋಗುತ್ತದೆ. ನಮ್ಮ 'ನಾಗರಿಕ' ಜಗತ್ತಿನ ಬಗ್ಗೆ ನಾಚಿಕೆ ಹುಟ್ಟುತ್ತದೆ. ಮತ್ತೆ ಆ ಜಗತ್ತಿನ ನೋವು ತುಸುವಾದರೂ ನಮ್ಮ ಮನಸ್ಸಿಗೆ ಅಳಿಸಲಾಗದಂತೆ ಅಂಟುತ್ತವೆ; ಇನ್ನಷ್ಟು ಸೂಕ್ಷ್ಮವಾಗಿ ಕೇಳಿಸಿಕೊಂಡರೆ ಇವು ಮಾರುವೇಷದಲ್ಲಿರುವ ನಮ್ಮದೇ ಬದುಕಿನ ಪದ್ಯಗಳೂ ಹೌದು ಎಂಬ ವಾಸ್ತವ ಅರಿವಾಗುತ್ತದೆ.

'ಮತ್ತೆ ಎಚ್ಚೆತ್ತುಕೊಳ್ಳುತ್ತಾನೆ' ಎಂಬ ಪದ್ಯದಲ್ಲಿ ಹಳ್ಳಿಯಿಂದ ಬಿಡಿಸಿಕೊಂಡು ಪೇಟೆಗೆ ಹೋಗುವ ಆದಿವಾಸಿ ಹುಡುಗನ ಚಿತ್ರಣವಿದೆ. ಅದು ಇಂದು ಮಹಾನಗರದಲ್ಲಿ ಬಂದು ಬೇರೂರಲೂ ಆಗದೆ, ಮರಳಿ ತನ್ನ ಊರ ನೆಲೆಗೆ ಮರಳಲೂ ಆಗದೆ ಹಳಹಳಿಸುತ್ತಿರುವ, ಬೇರು ಕಳೆದುಕೊಂಡು ಒದ್ದಾಡುತ್ತಿರುವ ಬಹುದೊಡ್ಡ ಸಮುದಾಯವನ್ನು ಪ್ರತಿನಿಧಿಸುವಂತಿದೆ. ಹಳ್ಳಿಯಿಂದ ಹೊರಟ ಹುಡುಗನನ್ನು ಕವಿ ಗ್ರಹಿಸುವ ರೀತಿಯೇ ಅನನ್ಯವಾಗಿದೆ.

'ಹಳ್ಳಿಯಿಂದ ಪೇಟೆಗೆ ಹೊರಟ
ಆದಿವಾಸಿ ಹುಡುಗನಿಗೆ ಏನಾಗುತ್ತದೆ?
ಪೇಟೆಯ ಕಡೆ ಆತ
ಮೆಲ್ಲಮೆಲ್ಲನೆ ನಡೆಯುವಾಗ
ಅವನ ಇತಿಹಾಸ